ವಿಮಾನ ಕ್ಷೇಮವಾಗಿ ಲ್ಯಾಂಡ್ ಆಯಿತು. ಪ್ರಯಾಣಿಕರಿಗೆಲ್ಲಾ ಕೈಮುಗಿದು ಹೊರಗೆ ಕಳಿಸಿಯಾಯ್ತು. ಎಲ್ಲರೂ ಇಳಿದ ಮೇಲೆ ರೀನಾ, ನೀತಾ, ದಿಶಾ ಸಹ ಇಳಿದರು. 'ನಾಳೆ ನಮ್ಮೆಲ್ಲರದೂ ಬೇರೆ ಬೇರೆ ಶಿಫ್ಟ್...ಬೇರೆ ಬೇರೆ ವಿಮಾನಗಳು. ಮತ್ತೆ ಯಾವಾಗ ಸಂಧಿಸುತ್ತೇವೋ ಗೊತ್ತಿಲ್ಲ' ದಿಶಾ ಎಂದಳು. 'ಹೌದು, ಇವತ್ತು ನಾವು ಉಳಿದುಕೊಳ್ಳುವ ಹೋಟೆಲ್ ಗಳೂ ಬೇರೆ ಬೇರೆಯವು...ಈ ಏರ್ ಪೋರ್ಟ್ ನಿಂದ ಹೊರಗೆ ಹೋಗುವವರೆಗಾದರೂ ಜೊತೆಗೇ ಇರೋಣ....ಹಾಗೇ ದಿಶಾ, ಹೊರಗೆ ನನ್ನ ಫಿಯಾನ್ಸಿ ಕಾಯುತ್ತಿದ್ದಾನೆ. ಅವನನ್ನು ನಿಮಗೆ ಪರಿಚಯ ಮಾಡಿಕೊಡ್ತೇನೆ...' ರೀನಾ ನಗುತ್ತಾ ಹೇಳಿದಳು. 'ವಾವ್, ಹೇಳಲೇ ಇಲ್ಲ ನೀನು...ಎನಿ ವೇ...ಕಂಗ್ರಾಜ್ಯುಲೇಶನ್ಸ್...' ದಿಶಾ, ನೀತಾ ಒಟ್ಟಿಗೇ ಹೇಳಿದರು. 'ಇನ್ನೂ ಒಂದು ಸರ್ ಪ್ರೈಸ್ ಇದೆ....ಬನ್ನಿ...ಬನ್ನಿ' ಎನ್ನುತ್ತಾ ರೀನಾ ಇಬ್ಬರನ್ನೂ ಕರೆದುಕೊಂಡು ಏರ್ ಪೋರ್ಟ್ ನಿಂದ ಹೊರಗೆ ಬಂದಳು. ಹೊರಗೆ ನಿಂತಿದ್ದ ಜನರತ್ತ ಕಣ್ಣಾಡಿಸಿದಳು. ತನ್ನ ಭಾವಿ ವರನಿಗಾಗಿ ಹುಡುಕಿದಳು. ದಿಶಾ, ನೀತಾ ಸಹ ಕುತೂಹಲದಿಂದ ಕಾಯತೊಡಗಿದರು. ಆಗ ಒಬ್ಬ ಸುಂದರ ಯುವಕ, 'ಹಾಯ್ ಹನೀ...' ಎನ್ನುತ್ತಾ ರೀನಾಳ ಬಳಿಗೆ ಬಂದ. ಅವನನ್ನು ನೋಡಿ ರೀನಾಳ ಕಂಗಳು ಅರಳಿದವು. ಇಬ್ಬರೂ ಗಾಢವಾಗಿ ಆಲಂಗಿಸಿಕೊಂಡ ನಂತರ, ರೀನಾ, 'ಅಭಿ, ಇವರು ನನ್ನ ಗೆಳತಿಯರು...ಇವಳು ದಿಶಾ ಅಂತಾ, ಇವಳು ನೀತಾ ಅಂತ' ಎಂದು ಪರಿಚಯ ಮಾಡಿಕೊಟ್ಟಳು. ಪರಸ್ಪರ ಪರಿಚಯದ ನಂತರ ರೀನಾ 'ಆಗಲೇ ಇನ್ನೊಂದು ಸರ್ ಪ್ರೈಸ್ ಇದೆ ಅಂತ ಹೇಳಿದ್ನಲ್ಲಾ, ಏನು ಗೊತ್ತಾ ಅದು? ಈ ಅಭಿ ಯಾರು ಅಂದ್ರೆ ಇವನು ನಿಮಗೂ ಪರಿಚಯ' ಎಂದಳು.

'ಹೌದಾ...ನಮಗೆ ಮೊದಲೇ ಪರಿಚಯ ಇದೆಯಾ? ಹೇಗೆ?' ದಿಶಾ, ನೀತಾ ಅಚ್ಚರಿಯಿಂದ ಕೇಳಿದರು. 'ಆಗಲೇ ಎಲ್ಲಾ ಹೇಳಿಬಿಟ್ಟೆಯಾ?' ಅಭಿ ಹುಸಿಮುನಿಸಿನಿಂದ ರೀನಾಳ ತಲೆಗೆ ಮೊಟಕಿದ. ದಿಶಾ, ನೀತಾ ಬೆರಗಿನಿಂದ ನೋಡುತ್ತಿದ್ದರು. ಅವರಿಗೆ ಸ್ವಲ್ಪವೂ ಅರ್ಥವಾಗಲಿಲ್ಲ. ಅವರ ಗೊದಲದ ಭಾವವನ್ನು ನೋಡಿ ರೀನಾ, 'ಒಕೆ..ಒಕೆ...ಇನ್ನು ನಿಮ್ಮನ್ನು ಕಾಯಿಸೋಲ್ಲ. ನಾನು ಆಗಲೇ ಹೇಳಿದ್ನಲ್ಲಾ...ಒಮ್ಮೆ ಒಬ್ಬ ತೆಲುಗು ಹುಡುಗ ಏಮೇ ಪಿಲ್ಲ, ಲೇಸೀ ಪೋದ್ದಾಮ್ಮಾ...ಎಂದು ಕೇಳಿದ್ದ. ನಾನು ಅವನಿಗೆ ಸರಿಯಾಗಿ ಉತ್ತರಿಸಿದ್ದೆ ಎಂದು. ಇವನು ಅದೇ ಹುಡುಗ' ಎಂದಳು. ದಿಶಾ, ನೀತಾ ಸ್ತಬ್ಧರಾಗಿ ನಿಂತರು. ಅವರಿನ್ನೂ ಅಚ್ಚರಿಯ ಸ್ಥಿತಿಯಲ್ಲೇ ಇದ್ದರು. ಅಭಿ ನಗುತ್ತಾ 'ಹೌದು, ನಾನು ಅದೇ ಹುಡುಗ. ಮೊದಲೆಲ್ಲಾ ಯಾರಾದರೂ ಹುಡುಗಿಯರನ್ನು ನೋಡಿದರೆ ತಮಾಷೆಯಿಂದ ಚುಡಾಯಿಸುತ್ತಿದ್ದೆ. ಅದರಲ್ಲೂ ಅವರಿಗೆ ಗೊತ್ತಿಲ್ಲದ ಭಾಷೆಯಲ್ಲಿ ಏನೇನೋ ಮಾತನಾಡುವುದೆಂದರೆ ಒಂಥರಾ ಖುಷಿಯಾಗುತ್ತಿದ್ದಿತು. ಅದೇ ರೀತಿ ಆ ದಿನವೂ ರೀನಾಗೆ ತೆಲುಗಿನಲ್ಲಿ ಚುಡಾಯಿಸಿದೆ. ಅವಳಿಗೆ ತೆಲುಗು ಚೆನ್ನಾಗಿ ಬರುತ್ತದೆಂದು ನನಗೆ ಗೊತ್ತಿರಲಿಲ್ಲ. ಆದರೆ ಅವಳು ತೆಲುಗಿನಲ್ಲಿ ತಿರುಗಿಸಿ ಉತ್ತರ ಕೊಟ್ಟಾಗ ಅವಾಕ್ಕಾದೆ. ಆಮೇಲೆ ಅವಳಿಗೆ ಸಾರಿ ಕೇಳಿ ಮುಂದೆ ಹೋದೆ. ಆದರೆ ಅವಳನ್ನು ಮರೆಯಲಿಕ್ಕೇ ಆಗಲಿಲ್ಲ. ಅವಳು ಉತ್ತರ ಕೊಟ್ಟ ರೀತಿ, ಅವಳ ಸ್ವಾಭಿಮಾನ ಅಪಾರವಾಗಿ ಹುಚ್ಚು ಹಿಡಿಸಿದವು. ಮದುವೆಯಾದರೆ ರೀನಾಳನ್ನೇ ಎಂದು ನಿರ್ಧರಿಸಿದೆ. ಅವಳು ಕೆಲಸ ಮಾಡುವ ಏರ್ ಲೈನ್ಸ್ ನಲ್ಲೇ ನನ್ನ ಪರಿಚಯದವರೊಬ್ಬರು ಇದ್ದಾರೆ. ಅವರಿಂದ ರೀನಾಳ ಶೆಡ್ಯೂಲ್ ತಿಳಿದುಕೊಂಡು ಅವಳು ಹೋಗುವ ಫ್ಲೈಟ್ ನಲ್ಲೇ ಸುಮಾರು ಬಾರಿ ಪ್ರಯಾಣಿಸಿದೆ. ಅಂತೂ ಈ ಸ್ವಾಭಿಮಾನದ ನಲ್ಲೆಯನ್ನು ಹಿಡಿಯುವಷ್ಟರಲ್ಲಿ ಸಾಕು ಸಾಕಾಯ್ತು...' ಎಂದ.

ಅವನ ಮಾತು ಕೇಳಿ ದಿಶಾ, ನೀತಾ ಜೋರಾಗಿ ನಕ್ಕರು. 'ಲವ್ಲಿ...ನಿಮ್ಮ ಭೇಟಿ ಅದ್ಭುತವಾಗಿದೆ...ತುಂಬಾ ಕ್ಯೂಟ್ ಲವ್ ಸ್ಟೋರಿ ನಿಮ್ಮದು...ಹೀಗೇ ಪ್ರೀತಿಯಿಂದ ಇರಿ' ಎಂದು ಹಾರೈಸಿದರು. ರೀನಾ ದಿಶಾಳ ಕಿವಿಯಲ್ಲಿ 'ಬದುಕು ಹೀಗೇ ದಿಶಾ...ಎಲ್ಲವನ್ನೂ ಕೊಡುತ್ತದೆ...ನಾವು ತಾಳ್ಮೆಯಿಂದ ಕಾಯಬೇಕಷ್ಟೇ..' ಎಂದಳು.

ಹೌದು ಎನ್ನುವಂತೆ ಕಣ್ರೆಪ್ಪೆಗಳನ್ನು ಮುಚ್ಚಿ ತೆಗೆದಳು ದಿಶಾ...ಹಾಗೇ ಅವಳ ಮುಖದ ಮೇಲೆ ನಿಜವಾದ ಮುಗುಳ್ನಗೆ ಲಾಸ್ಯವಾಡಿತು. ■



# ಕಟೌಟ್!

★ ಪಿ.ಜೆ.ರಾಘವೇಂದ್ರ

ನೋಡಲು ಸುಂದರನಾಗಿದ್ದ. ವಿದ್ಯೆ ಹತ್ತಲಿಲ್ಲವೋ ಏನೋ... ಎಸ್ಸೆಸ್ಸೆಲ್ಸಿ ಮುಗಿಸಲು ಸಾಧ್ಯವಾಗಲಿಲ್ಲ. ಜಿಮ್ ಸಹಾಯದಿಂದ ಕಟ್ಟುಮಸ್ತಾದ ದೇಹ ಹೊಂದಿದ್ದ ಆತ ಸ್ಟುಡಿಯೋ ಪ್ರವೇಶಿಸಿದ.

ಗುಂಗುರು ಕೂದಲು, ರೇಬಾನ್ ಕನ್ನಡಕ, ಬಿಳಿಯ ಪ್ಯಾಂಟು, ಅದೇ ಬಣ್ಣದ ಕಾಟನ್ ಶರಟು ತೊಟ್ಟಿದ್ದ ಆತನ ಕೈಯ ಎಂಟೂ ಬೆರಳಿನಲ್ಲಿ ಮಿರಮಿರ ಮಿಂಚುವ ಬಂಗಾರದ ಉಂಗುರಗಳಿದ್ದವು. ಜೊತೆಗೆ ಬಲಗೈಯಲ್ಲಿ ಕಾಲು ಕೇಜಿ ತೂಕದ ಬ್ರೇಸ್ಲೆಟ್! ಕೊರಳಿನಲ್ಲಿ ಸರಪಳಿಯಂತಹ ಬಂಗಾರದ ಸರ. ಅದರಲ್ಲಿ ನೇತಾಡುತ್ತಿರುವ ಹುಲಿಯುಗುರಿನ ಪದಕ.

ಷರಟಿನ ಎರಡು ಗುಂಡಿಗಳನ್ನು ಬಿಚ್ಚಿ ಎರಡೂ ಕೈಗಳನ್ನು ಮುಗಿದು ನಿಂತ ಆತ ಕ್ಯಾಮರಾ ಎದುರು ಪೋಸು ನೀಡಿದ. ವಿವಿಧ ಭಂಗಿಗಳಲ್ಲಿ ಆತ ನೀಡಿದ ಪೋಸಿಗೆ ಸರಿಯಾಗಿ ಫೋಟೋಗ್ರಾಫರ್ ಫೋಟೋ ಕ್ಲಿಕ್ಕಿಸತೊಡಗಿದ.

ಹೈಸ್ಕೂಲಿನಲ್ಲಿದ್ದಾಗಲೇ ಪುಂಡು ಹುಡುಗರ ಹಿಂಡಿನೊಂದಿಗೆ ಓಡಾಡುತ್ತಾ ನಾಯಕನಂತೆ ನಟಿಸುತ್ತಿದ್ದ ಈತ ನೇತಾರನಾಗುವ ಕನಸು ಕಾಣುತ್ತಿದ್ದ. ಮುಂದೆ ತನ್ನ ಹುಟ್ಟು ಹಬ್ಬ ಆದಾಗ ಅಭಿಮಾನಿಗಳೆಲ್ಲ ತನ್ನ ಈ ಫೋಟೋವನ್ನು ಬೃಹತ್ ಕಟೌಟ್ ಮಾಡಿ ನಗರದ ನಾಲ್ಕೂ ಮಾರ್ಗಗಳು ಕೂಡುವ ಕಡೆ ನಿಲ್ಲಿಸಿದಂತೆ ಕನಸು ಕಾಣತೊಡಗಿದ. ತಾನು ಪುಡಾರಿಯಾದಾಗ ಈ ಫೋಟೋವನ್ನೇ ಫ್ಲೆಕ್ಸ್ ಮಾಡಿ ನಗರದಾದ್ಯಂತ ಮೆರೆಯುವ ಕನಸು ಆತನಲ್ಲಿ ಮೂಡಿತು.

ಅವನ ಬಯಕೆಯಂತೆಯೇ ಫೋಟೋಗ್ರಾಫರ್ ವಿವಿಧ ಭಂಗಿಯಲ್ಲಿ ಆತನ ಫೋಟೋಗಳನ್ನು ಸೆರೆಹಿಡಿದ. ಎರಡು ದಿನ ಕಳೆಯುವಷ್ಟರಲ್ಲಿ ಆತನ ಬೃಹತ್ ಕಟೌಟನ್ನು ನಗರದ ನಾಲ್ಕು ರಸ್ತೆ ಕೂಡುವ ವೃತ್ತದಲ್ಲಿ ನಿಲ್ಲಿಸಲಾಗಿತ್ತು. ಕಟೌಟಿಗೆ ಬೃಹತ್ ಹಾರವನ್ನೂ ಹೇರಲಾಗಿತ್ತು.

ಕಟೌಟಿನ ಕೆಳಗೊಂದು ಬರಹವಿತ್ತು.

ಹತ್ತಿರ ಬಂದು ಓದಿದಾಗ ಅದರಲ್ಲಿ ಹೀಗೆ ಬರೆಯಲಾಗಿತ್ತು.

"ಶ್ರದ್ಧಾಂಜಲಿ'

ಜನನ: 21.12.1986

ಮರಣ:18.05.2016

"ಮತ್ತೆ ಹುಟ್ಟಿ ಬಾ' ■